

# ಪಿಟೀಲು ಮಾಂತ್ರಿಕ

# ಚೌಡಯ್ಯನವರಿಲ್ಲದ ಅರ್ಧ ಶತಮಾನ

ದಕ್ಷಿಣಾದಿ ಸಂಗೀತ ದಿಗಂತದಲ್ಲಿ ಕನ್ನಡನಾಡಿನ ಪ್ರೌಢಿಮೆಯನ್ನು ದಾಖಲು ಮಾಡಿದ ಮೈಸೂರು ಟಿ. ಚೌಡಯ್ಯನವರ ಸಾಧನೆ ಅವರ್ಣನೀಯ. ಈ ಸಂಗೀತ ದಿಗ್ಗಜನ ಹೆಗ್ಗುರುತಾಗಿ ಕಟ್ಟಿರುವ ಬೆಂಗಳೂರಿನ ಪೀಟಿಲು ಆಕೃತಿಯ 'ಚೌಡಯ್ಯ ಸ್ಮಾರಕ ಭವನ' ಸಾಂಸ್ಕೃತಿಕ ಜಗತ್ತಿನ ಬೆಳ್ಳಿಚುಕ್ಕಿ.

■ ಎನ್. ಜಗನ್ನಾಥಪ್ರಕಾಶ್



ಕರ್ನಾಟಕ ಸಂಗೀತವೆಂದರೆ ಮದ್ರಾಸಿಗೆ ಮಾತ್ರ ಸೀಮಿತವಾಗಿದ್ದ ಕಾಲ ಅದು. ಮೈಸೂರು ಪ್ರಾಂತ್ಯದಲ್ಲಿ ಗಮನಾರ್ಹ ಕರ್ನಾಟಕ ಸಂಗೀತ ವಿದ್ವಾಂಸರಿದ್ದರೂ ಅವರನ್ನು ಮದ್ರಾಸ್ ಪ್ರಾಂತ್ಯದ ಶ್ರೇಷ್ಠ ಸಂಗೀತಗಾರರು ಯಾರೂ ಲೆಕ್ಕಕ್ಕೆ ಇಟ್ಟಿರದಿದ್ದ ಸಮಯ. ಆದರೆ ಇದಕ್ಕೆ ಹೊರತಾಗಿದ್ದವರು ಮೈಸೂರು ಟಿ. ಚೌಡಯ್ಯನವರು ಮಾತ್ರ.

ಅಂದಿನ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿಯೇ ಹಲವಾರು ಪಿಟೀಲು ಪರಿಣಿತರಿದ್ದರೂ ಹೆಚ್ಚು ಕಡಿಮೆ ಎಲ್ಲಾ ಪ್ರಖ್ಯಾತ ಗಾಯಕರೂ ಬಯಸುತ್ತಿದ್ದ ಅಸಾಧಾರಣ ಪ್ರತಿಭೆಯ ಪಿಟೀಲು ವಿದ್ವಾಂಸರು ಟಿ. ಚೌಡಯ್ಯನವರು.

ಕಾವೇರಿಯ ನದಿಯ ತಟದ ತಿರುಮಲ ಕೂಡಲು ನರಸೀಪುರದಲ್ಲಿ 1895ರ ಜನವರಿ ಒಂದರಂದು ಹುಟ್ಟಿದ ಟಿ. ಚೌಡಯ್ಯನವರು ಕಣ್ಮರೆಯಾಗಿ ಈಗ 50 ವರ್ಷಗಳು (1967 ಜನವರಿ 19).

ಹಲವು ಹತ್ತು ಪಿಟೀಲು ವಾದಕರು ಬಂದು ಹೋದರೂ ಪಿಟೀಲು ವಾದ್ಯದೊಡನೆ ವಿದ್ವಾಂಸರ ಹೆಸರು ಸೇರಿ ಹೋಗಿದ್ದು ಟಿ. ಚೌಡಯ್ಯನವರದು ಮಾತ್ರ. ಕರ್ನಾಟಕ ಸಂಗೀತದ ಪ್ರತಿಷ್ಠಿತ ಪಿಟೀಲು ವಿದ್ವಾಂಸರೆಂಬ ಹೆಗ್ಗಳಿಕೆ ಗಳಿಸಿದ ಚೌಡಯ್ಯನವರು